# <u>ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ತಿ.ನರಸೀಪುರ.</u>
## <u>ಸಿ.ಸಿ.ನಂ.**1203/2021**</u>

ಸರಕಾರ ಪರಃ ಬನ್ನೂರು ಪೊಲೀಸ್ ಠಾಣೆ, ತಿ.ನರಸೀಪುರ -ವಿರುದ್ಧ- ಪ್ರಭ ಮತ್ತು ಮತ್ತೊಬ್ಬರು

## <u>ದೋಷಾರೋಪಣೆ</u>

ನಾನು ಚೇತನ್ ಅನ್ನಾಧಾನಿ ಮಂಜುನಾಥ, ಬಿ.ಎ.ಎಲ್., ಎಲ್.ಎಲ್.ಎಂ., ಪ್ರ. ದ. ನ್ಯಾ. ದಂ., ತಿ.ನರಸೀಪುರ ಈ ಮೂಲಕ,

**<u>ಆರೋಪಿತರಾದಃ</u>**

1. ಪ್ರಭ,
   ಬಿನ್.ಲಿಂಗರಾಜು,
   ಸುಮಾರು 40 ವರ್ಷ ವಯಸ್ಸು,
2. ಲಿಂಗರಾಜು,
   ಬಿನ್.ದೊಡ್ಡಕುಳ್ಳೇಗೌಡ,
   ಸುಮಾರು 45 ವರ್ಷ ವಯಸ್ಸು,

   ಆರೋಪಿತರ ವಾಸ.ಯಾಚೇನಹಳ್ಳಿ ಗ್ರಾಮ,
   ಬನ್ನೂರು ಹೋಬಳಿ, ತಿ.ನರಸೀಪುರ ತಾಲ್ಲೂಕು,
   ಮೈಸೂರು ಜಿಲ್ಲೆ.

ನಿಮ್ಮ ಮೇಲಿರುವ ಆರೋಪಣೆ ಏನೆಂದರೆ,

ದಿನಾಂಕಃ 29.04.2021 ರಂದು ರಾತ್ರಿ 7.30 ಗಂಟೆ ಸಮಯದಲ್ಲಿ ತಿ.ನರಸೀಪುರ ತಾಲ್ಲೂಕು ಬನ್ನೂರು ಪೊಲೀಸ್ ಠಾಣೆ ಸರಹದ್ದು, ಯಾಚೇನಹಳ್ಳಿ ಗ್ರಾಮದ ವಾಸಿ ಚಾಸಾ.1 ಅವರ ಮನೆಯ ಮುಂದೆ ಕುಳಿತಿರುವಾಗ ಪಕ್ಕದ ಮನೆ ವಾಸಿಗಳಾದ ಆರೋಪಿತರಾದ ನೀವು ಚಾಸಾ.1 ರವರ ಮನೆಯ ಹತ್ತಿರ ಸೌದೆ, ಕಸ, ಕಡ್ಡಿಗಳನ್ನು ಹಾಕುತ್ತಿರುವಾಗ ಚಾಸಾ.1 ರವರು ಏಕೆ ನಮ್ಮ ಮನೆಯ ಮುಂದೆ ಸೌದೆ, ಕಸೆ ಹಾಕುತ್ತಿದ್ದೀರಾ ಆಗಲೆ ಹೇಳಲಿಲ್ವ ನಮ್ಮ ಮನೆಯ ಮುಂದೆ ಹಾಕಬೇಡಿ ಎಂದು ಹೇಳಿದಾಗ 1ನೇ ಆರೋಪಿಯಾದ ನೀವು ಚಾಸಾ.1 ರವರನ್ನು ಕುರಿತು ಲೋಪರ್ ಮುಂಡೆ, ಬೇವರ್ಶಿ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ, ಆ ಮೂಲಕ ನೀವು ಭಾ.ದಂ.ಸಂ. ಕಲಂ 504 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರಿ.

ಅದೇ ರೀತಿ ಮೇಲೆ ಹೇಳಿದ ದಿವಸ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ, 1ನೇ ಆರೋಪಿಯಾದ ನೀವು ಏಕಾ ಏಕಿ ಚಾಸಾ.1 ರವರ ಮುಂದಲೆ ಹಿಡಿದು

ಎಳೆದಾಡಿದ್ದು ಅಕ್ರಮ ತಡೆಯುಂಟು ಮಾಡಿದ್ದು ಆ ಮೂಲಕ ನೀವು ಭಾ.ದಂ.ಸಂ. ಕಲಂ 341 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರಿ.

ಅದೇ ರೀತಿ ಮೇಲೆ ಹೇಳಿದ ದಿವಸ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ, 1 ನೇ ಆರೋಪಿಯಾದ ನೀವು ಕೈಗಳಿಂದ ಚಾಸಾ.1 ರವರ ಮೈಕೈಗೆ ಹೊಡೆದು ಕೆಳಗೆ ಬಿದ್ದಾಗ ಕಾಲಿನಿಂದ ಮೈಕೈಗೆ ತುಳಿದು ಹಾಗೂ 2 ನೇ ಆರೋಪಿಯಾದ ನೀವು ಕೈಯಿಂದ ಚಾಸಾ.1 ರವರ ಕಪಾಲಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ಆ ಮೂಲಕ ನೀವು ಭಾ.ದಂ.ಸಂ. ಕಲಂ 323 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರಿ.

ಆದುದರಿಂದ ಈ ಆರೋಪಣೆಯನ್ನು ನಿಮ್ಮ ಮೇಲಿಟ್ಟಿದ್ದು, ಅದರ ವಿಚಾರಣೆಯು ನಿಮ್ಮ ಮೇಲೆ ನಡೆಯತಕ್ಕದ್ದೆಂದು ಈ ಮೂಲಕ ಆದೇಶಿಸುತ್ತೇನೆ.

ಪ್ರಶ್ನೆಃ ಇದೀಗ ನಿಮಗೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರಃ

1 ನೇ ಆರೋಪಿ

2 ನೇ ಆರೋಪಿ

ಪ್ರಶ್ನೆಃ ನೀವು ತಪ್ಪೊಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಪರ ಪ್ರತಿರಕ್ಷಣೆ ಏನಾದರೂ ಇದೆಯೇ? ವಿಚಾರಣೆ ಆಗಬೇಕೇ?

ಉತ್ತರಃ

1 ನೇ ಆರೋಪಿ

2 ನೇ ಆರೋಪಿ

(ಮೇಲಿನ ಆರೋಪಿತರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಸದ್ರಿ ಆರೋಪಿತರಿಂದ ಪಡೆದಿದ್ದು ಅದು ಸತ್ಯಾಂಶವನ್ನು ಹೊಂದಿದೆಯೆಂದು ಪ್ರಮಾಣೀಕರಿಸಲಾಗಿದೆ.)

ದಿನಾಂಕಃ

ಪ್ರ.ದ.ನ್ಯಾ.ದಂ., ತಿ.ನರಸೀಪುರ.